JULY 12, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ, ಧಾರವಾಡ**

**ಪ್ರದೇಶ ಸಮಾಚಾರ**

<><><>

**1. 16ನೇ ರೋಜಗಾರ ಮೇಳಕ್ಕೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವರ್ಚುವಲ್ ಮಾಧ್ಯಮದ ಮೂಲಕ, ಹೊಸ ದಿಲ್ಲಿಯಲ್ಲಿ, 11.30ಕ್ಕೆ ಚಾಲನೆ ನೀಡಿದರು. ದೇಶದ 47 ವಿವಿಧ ಸ್ಥಳಗಳಲ್ಲಿ ಆಯೋಜಿಸಲಾದ, ರೋಜಗಾರ ಮೇಳದಲ್ಲಿ, ದೇಶದ 51 ಸಾವಿರ ಯುವ ಜನರಿಗೆ, ನೇಮಕಾತಿ ಆದೇಶ ಪತ್ರ ವಿತರಿಸಿದರು. ಬಿನಾ ಪರ್ಚಿ; ಬಿನಾ ಖರ್ಚಿ ನಿಯುಕ್ತಿ ಪತ್ರ ತಮ್ಮ ಧ್ಯೇಯ ಎಂದರು.**

<><><>

**ನೈಋತ್ಯ ರೇಲ್ವೆ, ಹುಬ್ಬಳ್ಳಿಯ ಕೇಶ್ವಾಪುರದ ಅಧಿಕಾರಿಗಳ ಕೂಟದ ಸಭಾಂಗಣದಲ್ಲಿ ಆಯೋಜಿಸಿದ್ದ ರೋಜಗಾರ ಮೇಳದಲ್ಲಿ, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ್ ಜೋಶಿ ಪಾಲ್ಗೊಂಡಿದ್ದರು.**

<><><>

**ಬೆಂಗಳೂರಿನಲ್ಲಿ ಆಯೋಜಿತ ರೋಜಗಾರ ಮೇಳದಲ್ಲಿ, ಕೇಂದ್ರದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ, ಭಾಗವಹಿಸಿದ್ದರು.**

<><><>

**2. ಕರ್ನಾಟಕ ಏಕೀಕರಣದ ರೂವಾರಿ, ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ, 145ನೇ ಜನ್ಮ ದಿನವಿಂದು. ಧಾರವಾಡ ಸೇರಿದಂತೆ, ನಾಡಿನ ಹಲವೆಡೆ, ವಿಶೇಷ ಕಾರ್ಯಕ್ರಮಗಳು, ಉಪನ್ಯಾಸಗಳು ಆಯೋಜಿತವಾಗಿವೆ.**

<><><>

**'ಸ್ವಾತಂತ್ರ್ಯ ಹೋರಾಟಗಾರರಾಗಿ, ಸಾಹಿತಿಯಾಗಿ ಹಾಗೂ ಸಮಾಜಸೇವಕರಾಗಿ ಅವರೊಂದು ಅನನ್ಯ ಮಾದರಿ. ಅವರು ಕನ್ನಡ ನಾಡಿಗೆ, ಅಪಾರ ಕೊಡುಗೆ ನೀಡಿದ್ದಾರೆ' ಎಂದು, ಸಚಿವ ಎಂ.ಬಿ. ಪಾಟೀಲ, ಸ್ಮರಿಸಿದ್ದಾರೆ.**

<><><>

**3. ವರಕವಿ ದ.ರಾ. ಬೇಂದ್ರೆ ಅವರ, ನಾಕುತಂತಿ ಕೃತಿಗೆ, ಜ್ಞಾನಪೀಠ ಪ್ರಶಸ್ತಿ ಪ್ರದಾನಗೊಂಡು, 52 ವರ್ಷಗಳು ಹಾಗೂ ಕೃತಿ ಪ್ರಕಟಗೊಂಡು, 60 ವರ್ಷ ಪೂರ್ಣಗೊಂಡಿವೆ. ಸುವರ್ಣ ಸಂಭ್ರಮದ ಹಿನ್ನೆಲೆ, ಧಾರವಾಡದ ಸಾಧನಕೇರಿಯ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಭವನದಲ್ಲಿ, ಇಂದು ಬೆಳಗ್ಗೆ, ಸಾಹಿತಿ, ಹಾಸನದ ಜಿ.ಬಿ. ಹರೀಶ, ವಿಶೇಷ ಉಪನ್ಯಾಸ ನೀಡಿದರು.**

<><><>

**ಜಿ.ಬಿ. ಹರೀಶ ಧ್ವನಿ 35 ಸೆಕೆಂದುಗಳು**

<><><>

4. ಧಾರವಾಡ ಜಿಲ್ಲೆ, ಕುಂದಗೋಳದ, ಟ್ರಕ್ ಟರ್ಮಿನಲ್ ಸಮಸ್ಯೆ ಕುರಿತು, ವಿಕಾಸಸೌಧದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಹಾಗೂ ಸಾರಿಗೆ ಖಾತೆ ಸಚಿವ ರಾಮಲಿಂಗಾ ರೆಡ್ಡಿ ಸಭೆ ನಡೆಸಿದರು.

<><><>

5. ಗದಗ, ಸಿಟಿಜನ್ಸ್ ಫಾರ್ ಸೋಷಿಯಲ್ ಜಸ್ಟೀಸ್ ಆಯೋಜಿಸಿದ್ದ, ತುರ್ತು ಪರಿಸ್ಥಿತಿಯ ಕರಾಳ ದಿನಗಳ, 50ನೇ ವರ್ಷಾಚರಣೆ ನಿಮಿತ್ತ, ರೋಚಕ ಕಥನಗಳ ಅನಾವರಣ ಕಾರ್ಯಕ್ರಮದಲ್ಲಿ, ಕೇಂದ್ರದ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಅಧಿಕಾರದ ದುರಾಸೆಯಿಂದ, 1975ರಲ್ಲಿ, ಕಾಂಗ್ರೆಸ್‌ನ ಇಂದಿರಾ ಗಾಂಧಿ ಅವರು, ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದರು ಎಂದರು.

<><><>

6. ಯುವಜನತೆಯ ಕೌಶಲ ವೃದ್ಧಿಸಿ, ಉದ್ಯೋಗಾವಕಾಶ ದೊರಕಿಸುವಲ್ಲಿ, –ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆ – ಜಿ.ಟಿ.ಟಿ.ಸಿ ಹಾಗೂ, ಜರ್ಮನಿಯ ತಾಂತ್ರಿಕ ಸಂಸ್ಥೆಯೊಂದಿಗೆ, ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು, ಕೌಶಲಾಭಿವೃದ್ಧಿ ಖಾತೆ ಸಚಿವ, ಶರಣ ಪ್ರಕಾಶ ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

7. 'ನ್ಯಾಯಯುತ ಮತ್ತು ಭರವಸೆಯ ಜಗತ್ತಿನಲ್ಲಿ, ಯುವಜನರು ಬಯಸುವ ಕುಟುಂಬಗಳನ್ನು ರಚಿಸಲು, ಅವರನ್ನು ಸಬಲೀಕರಿಸುವುದು' ಎಂಬ ಧ್ಯೇಯದಡಿ, ವಿಶ್ವ ಜನಸಂಖ್ಯಾ ದಿನಾಚರಣೆಯನ್ನು, ಅರ್ಥಪೂರ್ಣವಾಗಿ ಆಚರಿಸಿದ, ವರದಿಗಳು ಬಂದಿವೆ.

<><><>

ರಾಯಚೂರಿನಲ್ಲಿ, ಜನಸಂಖ್ಯಾ ದಿನಾಚರಣೆ ಜಾಗೃತಿ ಜಾಥಾಕ್ಕೆ, ಜಿಲ್ಲಾ ಆರೋಗ್ಯಾಧಿಕಾರಿ ಸುರೇಂದ್ರ ಬಾಬು ಚಾಲನೆ ನೀಡಿದರು.

<><><>

ಕೊಪ್ಪಳದಲ್ಲಿ, ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ, ಜಿಲ್ಲಾ ಆರೋಗ್ಯಾಧಿಕಾರಿ ಟಿ. ಲಿಂಗರಾಜು, ಗ್ರಾಮೀಣ ಭಾಗದ ಪ್ರತಿಯೊಬ್ಬರೂ, ಕುಟುಂಬ ಯೋಜನೆ ವಿಧಾನಗಳ ಬಗ್ಗೆ, ತಿಳಿದುಕೊಳ್ಳಬೇಕು ಎಂದರು.

<><><>

8. ರಾಜ್ಯ ಚುನಾವಣಾ ಆಯೋಗ, ನೂತನವಾಗಿ ರಚನೆಗೊಂಡ, 5 ಪಟ್ಟಣ ಪಂಚಾಯಿತಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತೆರವಾಗಿರುವ, ಸದಸ್ಯ ಸ್ಥಾನಗಳಿಗೆ, ಆಗಸ್ಟ್ 17 ರಂದು ಚುನಾವಣೆ ನಡೆಸಲಿದೆ.

<><><>

9. ಪ್ರಧಾನಮಂತ್ರಿಯವರ ದೂರದೃಷ್ಟಿಯ, 'ಫಿಟ್ ಇಂಡಿಯಾ' – ಸಂಡೇಸ್ ಆನ್ ಬೈಸಿಕಲ್, 31ನೇ ಆವೃತ್ತಿಯ ಅಭಿಯಾನವನ್ನು, ನಾಳೆ, ದೇಶದ 6 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ, ಕೇಂದ್ರ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ, ಆಯೋಜಿಸಿದೆ.

<><><>

10. ಸಾವಯುವ ಕೃಷಿ ಮಾದರಿಯಲ್ಲಿ, ಕೇವಲ ಒಂದು ಎಕರೆಯಲ್ಲಿ, ಡ್ರ್ಯಾಗನ್ ಫ್ರುಟ್ ಬೆಳೆದು, ಮೊದಲ ವರ್ಷದಲ್ಲೇ, ಒಂದು ಲಕ್ಷ ರೂಪಾಯಿ ಆದಾಯ ಗಳಿಸಿದ, ತಿಕೋಟಾ ತಾಲೂಕು, ಬಬಲೇಶ್ವರ ಬಳಿಯ, ರತ್ನಾಪುರ ಗ್ರಾಮದ, ಸಿದ್ದಪ್ಪ ಗಗನಮಾಲಿ ಅವರನ್ನು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ಅಭಿನಂದಿಸಿದ್ದಾರೆ.

<><><>

11. ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ, ಹೈಟೆಕ್ ಸ್ಪರ್ಶ ನೀಡಲು ಸರ್ಕಾರ ಮುಂದಾಗಿದೆ; ಮೂಲಸೌಕರ್ಯಗಳ ಅಭಿವೃದ್ಧಿ, ಸುಧಾರಿತ ಸಾರಿಗೆ ಸಂಪರ್ಕ, ವಿವಿಧ ವಾಣಿಜ್ಯ ಹಾಗೂ ವಾಣಿಜ್ಯೇತರ ಕಟ್ಟಡಗಳನ್ನು ನಿರ್ಮಿಸಿ, ಬಹು ಮಾದರಿ ಸಂಚಾರಿ ಹಬ್ ಆಗಿಸಲು, ಸಿದ್ಧತೆ ನಡೆದಿದೆ ಎಂದು, ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ.

<><><>

12. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಮುಂದಿನ 7 ದಿನ, ರಾಜ್ಯದ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ವ್ಯಾಪಕವಾಗಿ ಮಳೆ ಸಾಧ್ಯತೆಯಿದ್ದು, ಅಲ್ಲಲ್ಲಿ ಭಾರಿ ಮಳೆ ಹಾಗೂ ಒಳನಾಡು ಜಿಲ್ಲೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.